# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 252

ಸದಸ್ಯರ ಹೆಸರು : ಶ್ರೀ ಬಿ.ಜಿ.ಪಾಟೀಲ್
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಉತ್ತರಿಸುವ ದಿನಾಂಕ : 14.09.2021

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕೋವಿಡ್-19ರ ಹಿನ್ನೆಲೆಯಲ್ಲಿ ಇನ್ವೆಸ್ಟ್ ಕರ್ನಾಟಕ-2020 ಜಾಗತಿಕ ಹೂಡಿಕೆದಾರರ ಸಮಾವೇಶವನ್ನು ಆಯೋಜಿಸಲು ಸಾಧ್ಯವಾಗಿಲ್ಲದೆ ಕಾರಣ, ಈ ಸಮಾವೇಶವನ್ನು ಪ್ರಸಕ್ತ ಸಾಲಿನಲ್ಲಿ ಆಯೋಜಿಸಲಾಗುವುದೇ; (ವಿವರ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ ಸಿಐ 129 ಎಸ್‌ಪಿಐ 2021, ದಿನಾಂಕ 23.07.2021ರಲ್ಲಿ "ಇನ್‌ವೆಸ್ಟ್ ಕರ್ನಾಟಕ 2022:ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ"ವನ್ನು 2022ರ ಫೆಬ್ರವರಿ 9 ರಿಂದ 11 ರವರೆಗೆ ಬೆಂಗಳೂರಿನಲ್ಲಿ ಆಯೋಜಿಸಲು ಆಡಳಿತಾತ್ಮಕ ಅನುಮೋದನೆ ನೀಡಿದೆ.<br><br>ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ಆಯೋಜಿಸಲು ಪೂರ್ವ ಸಿದ್ಧತೆಗಳಿಗಾಗಿ ಕನಿಷ್ಠ 1 ವರ್ಷ ಬೇಕಾಗಿರುವುದರಿಂದ ಹಾಗೂ ಕೋವಿಡ್-19 ಸಾಂಕ್ರಾಮಿಕದ ಹಿನ್ನೆಲೆಯಲ್ಲಿ ಫೆಬ್ರವರಿ 2022ರಲ್ಲಿ ಸದರಿ ಸಮಾವೇಶವನ್ನು ಆಯೋಜಿಸಲು ಕಷ್ಟಸಾಧ್ಯವಾಗಿರುವುದರಿಂದ, 2022ರ ಸಾಲಿನ ಮುಂದಿನ ಬೇರೆ ಮಾಹೆಯಲ್ಲಿ ಈ ಸಮಾವೇಶವನ್ನು ಆಯೋಜಿಸುವ ಸಂಬಂಧ ಪರಿಶೀಲಿಸಲಾಗುತ್ತಿದೆ. |
| ಆ | ಆಯೋಜಿಸಿದ್ದಲ್ಲಿ, ಎಲ್ಲಿ ಮತ್ತು ಯಾವಾಗ ಆಯೋಜಿಸಲಾಗುವುದು; (ವಿವರ ನೀಡುವುದು) | |
| ಇ | ಹೂಡಿಕೆದಾರರು ಬಂಡವಾಳ ಹೂಡಲು ಮುಂದಾದಲ್ಲಿ ಹೂಡಿಕೆದಾರರಿಗೆ ರಾಜ್ಯ ಸರ್ಕಾರದಿಂದ ಸಿಗುವ ರಿಯಾಯಿತಿಗಳೇನು? (ವಿವರ ನೀಡುವುದು) | ರಾಜ್ಯದಲ್ಲಿ ಸಮಗ್ರ ಕೈಗಾರಿಕಾಭಿವೃದ್ಧಿಗೆ ನೂತನ ಕೈಗಾರಿಕಾ ನೀತಿ 2020-25ನ್ನು ದಿನಾಂಕ 13.08.2020 ರಿಂದ ಜಾರಿಗೆ ತರಲಾಗಿದೆ. ಸದರಿ ನೀತಿಯಡಿ ರಾಜ್ಯದಲ್ಲಿ ಬಂಡವಾಳ ಹೂಡುವ ಕೈಗಾರಿಕೆಗಳಿಗೆ ಈ ಕೆಳಕಂಡ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ನೀಡಲು ಅವಕಾಶ ಕಲ್ಪಿಸಿದೆ.<br>1. ಮುದ್ರಾಂಕ ಶುಲ್ಕ ವಿನಾಯಿತಿ ಮತ್ತು ನೋಂದಣಿ ಶುಲ್ಕ ರಿಯಾಯಿತಿ.<br>2. ಭೂ ಪರಿವರ್ತನಾ ಶುಲ್ಕ ಮರುಪಾವತಿ.<br>3. ವಹಿವಾಟಿನ ಮೇಲೆ ಬಂಡವಾಳ ಹೂಡಿಕೆ ಸಹಾಯಧನ.<br>4. ಇಟಿಪಿ ಘಟಕ ಸಹಾಯಧನ.<br>5. ಅಂಕರ್ ಘಟಕ ಸಹಾಯಧನ.<br>6. ಎಂಎಸ್‌ಎಂಇಗಳಿಗೆ ವಿದ್ಯುತ್‌ಚ್ಛಕ್ತಿ ತೆರಿಗೆ ವಿನಾಯಿತಿ |

| | | |
|---|---|---|
| | | ಮುಂದುವರೆದಂತೆ, ವಿವಿಧ ವಲಯಗಳ ಕೈಗಾರಿಕಾಭಿವೃದ್ಧಿಗೆ ಕರ್ನಾಟಕ ಏರೋಸ್ಪೇಸ್ ನೀತಿ 2013–23, ಕರ್ನಾಟಕ ಎಲೆಕ್ಟ್ರಿಕಲ್ ವೆಹಿಕಲ್ ಮತ್ತು ಎನರ್ಜಿ ಸ್ಟೋರೆಜ್ ಪಾಲಿಸಿ–2017, ನ್ಯೂ ಗಾರ್ಮೆಂಟ್ & ಟೆಕ್ಸ್‌ಟೈಲ್ ಪಾಲಿಸಿ, 2019 ಜಾರಿಯಲ್ಲಿದ್ದು, ಸದರಿ ನೀತಿಗಳಲ್ಲಿ ಸಹ ವಿವಿಧ ಪ್ರೋತ್ಸಾಹ ಮತ್ತು ರಿಯಾಯಿತಿ ನೀಡಲು ಅವಕಾಶ ಕಲ್ಪಿಸಿದೆ. |

ಸಿಐ 260 ಎಸ್‌ಪಿಐ 2021

(ಮುರುಗೇಶ ಆರ್. ನಿರಾಣಿ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು